ಈ ವಿಚಾರ ಪದೇ ಪದೇ ಇಲ್ಲಿ ಬರುತ್ತಿದೆ. ನನಗೆ ತಿಳಿದಿರುವಂತೆ 1 ವರ್ಷಕ್ಕಿಂತ ಹೆಚ್ಚು ಕಾಲದಿಂದ ಇದೇ ರೀತಿಯ ಜವಾಬು ಬರುತ್ತಿದೆ. ಇದು ಯಾವಾಗ ಮುಕ್ತಾಯವಾಗುತ್ತದೆ. ಈ ತಿದ್ದುಪಡಿಯನ್ನು ತರುವುದಕ್ಕೆ ಸರ್ಕಾರಕ್ಕೆ ಏನು ಕಷ್ಟವಾಗಿದೆ? ಅಥವಾ ಬಿ.ಡಿ.ಎ.ಗೆ ಏನು ಕಷ್ಟ ಇದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎಸ್. ಬಂಗಾರಪ್ಪ: ಹೀಗೆ ಕೆಲವು ತರಾವುಗಳನ್ನು ಮಾಡಿರತಕ್ಕದ್ದು ನಿಜ. ಅದರ ಪ್ರಕಾರ ಸದ್ಯದಲ್ಲೇ ಇಂಥ ತಿದ್ದುಪಡಿಗಳನ್ನು ಅತಿ ಶೀಘ್ರವಾಗಿ ಈ ಸದನದ ಮುಂದೆ ತರುತ್ತಿದ್ದೇವೆ.

ಶ್ರೀ ಎ.ಕೆ. ಅನಂತಕೃಷ್ಣ: ಇದು ಅತಿ ಶೀಘ್ರವಾಗಿ ಎಂದು ನನಗೆ ಗೊತ್ತಿದೆ. ಆದರೆ ಇದಕ್ಕೆ ಯಾವತ್ತು ಪರಿಹಾರ ಸಿಕ್ಕುತ್ತದೆ. ಹಿಂದೆ ಸಾವಿರಾರು ಜನರು ಈ ಕಷ್ಟಕ್ಕೆ ಸಿಕ್ಕೆ ಹಾಕಿಕೊಂಡಿದ್ದಾರೆ. ಬಿ.ಡಿ.ಎ. ರೆಸಲ್ಯೂಷನ್ ಮಾಡಿದ್ದೂ ಆಗಿದೆ. ಒಳಗಿನ ವಿಚಾರವನ್ನು ಹೇಳುವುದಾದರೆ ಇಲ್ಲಿ ಲಕ್ಷಾಂತರ ರೂಪಾಯಿಯ ಅವ್ಯವಹಾರಗಳು ನಡೆದಿದೆ. ತಾವು ಇಷ್ಟು ನಿಧಾನ ಮಾಡುತ್ತೀರಿ ಅಷ್ಟೂ ಕೂಡ ಅವ್ಯವಹಾರಗಳಿಗೆ ಅನುಕೂಲವಾಗುತ್ತದೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ತೀವ್ರವಾಗಿ ಗಮನಕೊಡುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಗಮನಕೊಡುತ್ತೇವೆ. ಆದಷ್ಟು ವಿಷಯಗಳೂ ಸರ್ಕಾರಕ್ಕೂ ಕೂಡ ಗೊತ್ತಿದೆ.

ಶ್ರೀ ಎ.ಕೆ. ಅನಂತಕೃಷ್ಣ : ಒಂದು ಪಾಸಿಟಿವ್ ಡೇಟನ್ನು ಏನಾದರೂ ಹೇಳುತ್ತೀರಾ?

ವರುಣಾ ನಾಲೆ ಬಗ್ಗೆ ವಿಶೇಷ ಸಮಿತಿಯ ರಚನೆ:

1579 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ವರುಣಾ ನಾಲಾ ವಿರೋಧಿ ಅಂತ್ಯಗೊಂಡಾಗ ಮಂಡ್ಯ ಜಿಲ್ಲೆಯ ರೈತರು ಹಾಗೂ ಸರ್ಕಾರದ ಮಧ್ಯೆ ಆದ ಒಪ್ಪಂದಗಳು ಅನ್ವಯ ಸರ್ಕಾರಿ ಆಜ್ಞೆಯಾಗಿರುವಂತೆ ಅಚ್ಚುಕಟ್ಟುದಾರರಿಗೆ ನೀರಿನ ಬಳಕೆಯ ಬಗ್ಗೆ ವಿಶೇಷ ಸಮಿತಿಯನ್ನು ರಚಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಸರ್ಕಾರದ ಆದೇಶ ಸಂ. ಪಿಡಬ್ಲ್ಯೂಡಿ 7 ಎಂಕೆಎಸ್ 79, ದಿನಾಂಕ 27-3-79ರ ಪ್ರಕಾರ, ಒಂದು ವಿಶೇಷ ಶಾಸನಬದ್ಧ ಸಮಿತಿಯನ್ನು ರಚಿಸಬೇಕಾಗಿದೆ. ಈ ಬಗ್ಗೆ ಕ್ರಮ ಸಧ್ಯದಲ್ಲಿಯೇ ಕೈಗೊಳ್ಳಲಾಗುವುದು.

11.40 ಪಿ.ಎಂ.

ಶ್ರೀ ಎಂ.ಎಸ್. ಆತ್ಮಾನಂದ : ಸನ್ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಒಂದು ವಿಶೇಷವಾದ ಶಾಸನಬದ್ಧ ಸಮಿತಿಯನ್ನು ರಚಿಸಬೇಕೆಂದು ತಿಳಿಸಿದ್ದಾರೆ ಈ ಒಂದು ಸಮಿತಿಯನ್ನು ರಚಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ. ಅಧ್ಯಕ್ಷರೆ ಈ ಒಂದು ಒಪ್ಪಂದವಾಗಿ ಸುಮಾರು 12 ವರ್ಷಗಳು ಇಲ್ಲಿಯವರೆಗೆ ಕಳೆದಿದೆ, ಈ ಸಮಿತಿಯನ್ನು ರಚಿಸಲು ಏಕೆ ಇಷ್ಟು ತಡವಾಯಿತು ಅಥವಾ ಈ ಸಮಿತಿಯನ್ನು ರಚಿಸಲು ಏನಾದರೂ ಅಡ್ಡಿ ಆಡಚಣೆಗಳಿವೆಯೇ ಎಂಬುದರ ಬಗ್ಗೆ ನಾನು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ 1979ರಲ್ಲಿ ಆದ ಈ ಒಂದು ತೀರ್ಮಾನದಲ್ಲಿ ಹಲವಾರು ನಿಯಮಗಳು, ನಿಬಂಧನೆಗಳಿವೆ. ಇದನ್ನು ಉಭಯತ್ರರು

ಅನುಸರಿಸಬೇಕು ಏನ್ನತಕ್ಕ ವಿಚಾರದಲ್ಲಿ ಈ ಒಂದು ವಿಶೇಷ ಸಮಿತಿಯನ್ನು ಮಾಡಬೇಕಾಗಿದೆ, ಅದು ತಡವಾಗಿದೆ, ತಕ್ಷಣ ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ: ಈ ವರುಣನಾಲೆ ಮತ್ತು ನಮ್ಮ ಕೆ.ಆರ್.ಎಸ್. ಆಧುನೀಕರಣಕ್ಕೆ ಸಮನಾಗಿ ಹಣವನ್ನು ಬಿಡುಗಡೆ ಮಾಡಬೇಕೆಂದು ಈ ಒಂದು ಒಪ್ಪಂದದಲ್ಲಿದೆ. ಕಳೆದ ವರ್ಷ ಈ ಯೋಜನೆಗಳ ಬಗ್ಗೆ ತಾರತಮ್ಯವಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈ ಯೋಜನೆಗಳಿಗೆ ಹಣವನ್ನು ಸಮನಾಗಿ ಬಿಡುಗಡೆ ಮಾಡುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಎಸ್. ಬಂಗಾರಪ್ಪ: ಇದು ನೇರವಾಗಿ ಈ ಪ್ರಶ್ನೆಗೆ ಸಂಬಂಧವಿಲ್ಲದಿದ್ದರೂ ಕೂಡ ಈಗಾಗಲೇ ಇದರ ಬಗ್ಗೆ ಕೆಳಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಎರಡೂ ಕಡೆಗಳಲ್ಲಿಯೂ ಈ ಪ್ರಶ್ನೆ ಬಂದಿದೆ. ಅದು ವರುಣಾನಾಲೆ ಬಗ್ಗೆ ಇರಬಹುದು ಮತ್ತು ಈಗಿರುವ ವಿಶ್ವೇಶ್ವರಯ್ಯ ಕ್ಯಾನಲ್ ರಿಪೇರಿ ಮಾಡತಕ್ಕಂತಹ ವಿಚಾರದಲ್ಲಿ ಇರಬಹುದು. ಹಣವನ್ನು ಹೆಚ್ಚಾಗಿ ಕೊಡಬೇಕೆಂದು ಒತ್ತಡಕ್ಕೆ ಸರ್ಕಾರ ಬದ್ಧವಾಗಿದೆ. ಅದರಂತೆ ಎರಡಕ್ಕೂ ಹಣವನ್ನು ಕೊಡುತ್ತೇವೆ, ಈ ಯೋಜನೆಗಳು ಅಭಿವೃದ್ಧಿಯಾಗಬೇಕೆಂಬ ಉದ್ದೇಶದಿಂದ ನಾವು ಹಣವನ್ನು ಕೊಡುತ್ತೇವೆ ಅದಕ್ಕಾಗಿ ತಮಗೆ ಅನುಮಾನ ಬೇಕಾಗಿಲ್ಲ. ಹಣವನ್ನು ಕೂಡ ತೆಗೆದಿಟ್ಟಿದ್ದೇವೆ.

ಶ್ರೀ ಕೆ. ಹರ್ಷಕುಮಾರಗೌಡ: ಸನ್ಮಾನ್ಯ ಅಧ್ಯಕ್ಷರೆ, ವರುಣಾನಾಲೆಯ ಕೆಲಸ ಬಹಳ ನಿಧಾನವಾಗಿದೆ. ನಮ್ಮ ಮೈಸೂರು ತಾಲ್ಲೂಕಿನ ರೈತರಿಗೆ ಆತಂಕವೇನೆಂದರೆ, ಈ ಕೆಲಸ ನಡೆಯುತ್ತಿದೆಯೋ ಅಥವಾ ಇಲ್ಲವೋ? ಎಂದು ಗೊತ್ತಾಗದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಜೊತೆಗೆ ಈ ಸಿಡಿಮದ್ದಿನ ಸ್ಫೋಟಕದ ಬಗ್ಗೆ ತಜ್ಞರ ಅಭಿಪ್ರಾಯವೇನಾಯಿತು ಎಂಬುದು ತಿಳಿಯಲಿಲ್ಲ; ಅದು ತಮ್ಮ ಗಮನಕ್ಕೂ ಬಂದಿದೆಯೇ. ಈ ಸಿಡಿಮದ್ದಿನ ಬದಲು ಬಂಡೆಯನ್ನು ಕಾರ್ಮಿಕರ ಕೈಯಲ್ಲಿ ಕೊರೆಸಿ ಏತಕ್ಕೆ ಈ ವರುಣನಾಲೆ ತೋಡಿಸಬಾರದೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ವರುಣಾನಾಲೆಯ ಬಗ್ಗೆ ಹಲವಾರು ಬಾರಿ ಪ್ರಶ್ನೆ ಬಂದಿದೆ, ಉತ್ತರವನ್ನೂ ಕೊಟ್ಟಿದ್ದೇವೆ. ಕೆಲಸಕಾರ್ಯಗಳು ಯಾವರೀತಿ ನಡೆಯಬೇಕೋ ಆ ರೀತಿ ನಡೆಯುತ್ತಿವೆ. We have to provide more funds particularly for that. That is a matter which is now under serious consideration and we are providing funds also.

ಶ್ರೀ ವಾಟಾಳ್ ನಾಗರಾಜ್: ಮೊದಲಿನಿಂದಲೂ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದಿರಿ, ಸುಮಾರು 3-4 ತಿಂಗಳಿನಿಂದಲೂ ಅದನ್ನೇ ಹೇಳುತ್ತಿದ್ದಿರಿ.

ಶ್ರೀ ಎಸ್. ಬಂಗಾರಪ್ಪ: ಪ್ರಾರಂಭಮಾಡುವುದಲ್ಲಾ? ಕೆಲಸ ನಡೆಯುತ್ತಿದೆಯೆಂದು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಆಗ ಈ ಯೋಜನೆಯನ್ನು ಪ್ರಾರಂಭ ಮಾಡಿದಾಗ ಇಟ್ಟ ಬಡ್ಜೆಟ್‌ಗೂ ಈಗ ಆಲೋಚನೆ ಮಾಡುವುದಕ್ಕೂ ಏನೇನು ಸಂಬಂಧವಿಲ್ಲ. ಆದರೆ ಒಂದು ವಿಚಾರವನ್ನು ಮುಖ್ಯವಾಗಿ ಪರಿಶೀಲನೆ ಮಾಡಬೇಕಾಗಿದೆ. ಈ ವರುಣಾನಾಲೆಗೆ ಸಂಬಂಧಪಟ್ಟ ಹಾಗೆ ಕೆ.ಆರ್.ಎಸ್.ನ ಆಣೆಕಟ್ಟೆಯಲ್ಲಿ 80 ಅಡಿ ಎತ್ತರದಲ್ಲಿ 1200 ಕ್ಯೂಸೆಕ್ಸ್ ನೀರು ಹೋಗಲು ಒಂದು ಔಟ್‌ಲೆಟ್‌ನ್ನು ತೆರೆಯತಕ್ಕಂತದ್ದು ತಡವಾಗಿದೆ. ಆದರೆ ಕೆಲಸವಾಗದೆ ಉಳಿದ ಕೆಲಸವಾದರೆ ಏನೂ ಪ್ರಯೋಜನವಿಲ್ಲ. ಎರಡನೆಯದಾಗಿ ಎಲ್ಲಿ ನಿಮ್ಮ ಅಕ್ವಿಡೆಕ್ಟ್ ಬರುತ್ತದೆ. ಬಹುಶಃ ಅದು 21ನೇ ಕಿ.ಮೀ. ಎಂದು ನನಗೆ ನೆನಪು ಅಕ್ವಿಡೆಕ್ಟ್‌ವರೆಗೆ ಉಳಿದ ಕೆಲಸವನ್ನು ಮಾಡಿ ನೀರನ್ನು ಕೊಡಬೇಕೆಂಬುದು ಮೊದಲನೆಯದು. ಆ ಅಕ್ವಿಡೆಟ್‌ನ

ಕೆಲಸವಾಗದೆ ನಾವು ಮುಂದೆ ಹೋಗುವುದಕ್ಕಾಗುವುದಿಲ್ಲ. ಆದುದರಿಂದ ಅಲ್ಲಿಯವರೆಗೆ ಸುಮಾರು ಐದು ಸಾವಿರ ಎಕರೆಗೂ ಹೆಚ್ಚು ಪ್ರದೇಶಕ್ಕೆ ನೀರನ್ನು ಕೊಡಬಹುದು ಎಂದು ಆಕಾಲಕ್ಕೆ ಒಂದು ಸೂಚನೆ ಇತ್ತು. ಈ ಎರಡೂ ವಿಚಾರದಲ್ಲಿ ಪ್ರಗತಿ ಏನು ಸಾಧಿಸಿದ್ದೀರಿ, ಇದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನೇರವಾಗಿ ಈ ಪ್ರಶ್ನೆಗೆ ಇದು ಸಂಬಂಧಪಡುವುದಿಲ್ಲ, ಅದರ ಬಗ್ಗೆ ನನ್ನ ಬಳಿ ವಿವರಣೆಗಳೂ ಇಲ್ಲ. ಆದರೆ ಹಿಂದೆ ಈ ಪ್ರಶ್ನೆಬಂದಾಗ ತಾವು ಕೂಡ ಸಲಹೆಯನ್ನು ಕೊಟ್ಟಿದ್ದಿರಿ, ಅದಕ್ಕೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಹಣವನ್ನು ಹೆಚ್ಚು ಕೊಡಬೇಕು ಎನ್ನತಕ್ಕಂತಹ ವಿಚಾರದಲ್ಲಿ ನಾನು ತತ್‌ಕ್ಷಣ ಅಂಕಿಅಂಶವನ್ನು ಕೊಡಲಾರೆ, ಅಕ್ವಿಡೆಕ್ಟ್‌ವರೆಗಾದರೂ ಈ ಕೆಲಸ ಕಾರ್ಯ ನಡೆಯಬೇಕು ಎನ್ನತಕ್ಕಂತಹ ವಿಚಾರದಲ್ಲಿ ಭಿನ್ನಾಭಿಪ್ರಾಯಕ್ಕೆ ಬರಲೂ ಸಾಧ್ಯವಿಲ್ಲ. That is why generally I said, without all those details with me, I cannot answer that question.

ಆದರೂ ಕೂಡ ಫಂಡ್ ಜಾಸ್ತಿ ಕೊಡಬೇಕು. ಬ್ಲಾಸ್ಟಿರಿಂಗ್‌ವರ್ಕ್ ಒಂದು ಕಡೆ ನಡೆಯಲಿ, ಉಳಿದಿರತಕ್ಕಂತಹ ಕೆಲಸ ಕಾರ್ಯಗಳು ಸಹ ನಡೆಯಲಿ ಎನ್ನುವುದು ತಮ್ಮ ಅಭಿಪ್ರಾಯ.

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನ ಪ್ರಶ್ನೆ ಇದು ಅಲ್ಲವೇ ಅಲ್ಲ. ನನ್ನ ಪ್ರಶ್ನೆಗೆ ನೇರವಾಗಿ ಸಂಬಂಧ ಇದೆ. ಅಲ್ಲಿ ಏನು ಹೇಳಿದ್ದಾರೆಂದರೆ, with your kiind permission, after the agreement between the ryots of Mandya, regarding utilisation of water, as per the Government order, ತಮಗೆ ಗೊತ್ತಿದೆ, ಎಷ್ಟು ದೊಡ್ಡ ಪ್ರಮಾಣದಲ್ಲಿ ಚಳುವಳಿ ನಡೆಯಿತು ಎಂದು, ಆಗ ಮುಖ್ಯವಾಗಿ ಅಗ್ರಿಮೆಂಟ್ ಆಗಿರತಕ್ಕಂತಹದು. M. Modernisation of Vishweswaraiah Canal, side by side development of this. ಇದು ಅಲ್ಲದಿದ್ದರೆ ಅದಕ್ಕವರು ಒಪ್ಪುತ್ತಿರಲಿಲ್ಲ. ಈ ನವೀಕರಣಕ್ಕೂ ಸಾಕಷ್ಟು ಹಣ ಬಿಡುಗಡೆ ಮಾಡಲಿಲ್ಲ. ಅಲ್ಲಿ ಅಚ್ಚುಕಟ್ಟುದಾರರಿಗೆ ಏನು ವರುಣಾ ನಾಲೆಯಲ್ಲಿ ಹೇಳಿದ್ದೇವೆ, ಅದರಂತೆ ಕೃಷ್ಣರಾಜಸಾಗರದಲ್ಲಿ ಆ ಗೇಟ್ ತೆಗೆಯದೇ ಉಪಯೋಗವಾಗುವುದಿಲ್ಲ. ಎರಡು ಕೆಲಸ ಒಟ್ಟಿಗೆ ನಡೆಯಬೇಕಾಗಿದೆ. ಹಣ ಹೆಚ್ಚು ಕೊಡಿ, ಇದನ್ನು ಬಿಡುಗಡೆ ಮಾಡಿ ಅಂಥ ಪ್ರಶ್ನೆ ಅಲ್ಲ. ಸರ್ಕಾರ ಕಮಿಟ್‌ಮೆಂಟ್ ಮಾಡಿಕೊಂಡಿದೆ. ಕಮಿಟ್‌ಮೆಂಟ್ ಆಧಾರದ ಮೇಲೆ ತಾವು ಹೇಗೆ ಮಾನ್ಯ ಮಾಡುತ್ತೀರಿ ಎಂಬುದು ಬೇಕು. ಆ ದೃಷ್ಟಿಯಿಂದ ಹೇಳಿದೆ. ಕೃಷ್ಣರಾಜಸಾಗರದಲ್ಲಿ ಗೇಟ್ ತೆಗೆಯದೆ ನೀರು ಈಚೆಗೆ ಬರುವುದಿಲ್ಲ. ಆದ್ದರಿಂದ ಮಾಡ್ರನೈಜೇಶನ್ ಮತ್ತು ವರುಣಾ ನಾಲೆ ಕೆಲಸ ಜೊತೆಗೆ ತೆಗೆದುಕೊಂಡು ಹೋಗದೇ ಇದ್ದರೆ ರೈತರಿಗೆ ಕೊಟ್ಟ ಮಾತಿನಂತೆ ನಾವು ತೆಗೆದುಕೊಂಡಂತೆ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಅದಕ್ಕೆ ವಿಶೇಷ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಅಧ್ಯಕ್ಷರೇ ಯಾವ ಒಂದು ಒಪ್ಪಂದ ಆ ಸಂದರ್ಭದಲ್ಲಿ ಆಗಿತ್ತೋ, ಆ ಒಪ್ಪಂದದ ಕಲಮ್‌ಗಳು ಅಥವಾ ಷರತ್ತುಗಳು ಏನೇನು ಇವೆ, ಅದರ ಪ್ರಕಾರ ಸರ್ಕಾರ ನಡೆಯಬೇಕಾಗಿರುತ್ತದೆ, ಅದಕ್ಕೆ ಸರ್ಕಾರ ಬದ್ಧವಾಗಿ ಇರಲೇಬೇಕಾಗುತ್ತದೆ. ಬದ್ಧವಾಗಿದೆ, ಅದರ ಪ್ರಕಾರ ಸಣ ಒದಗಿಸುವುದು ಏನಿದೆ. ಅದು ಇರಬಹುದು. ವಿಶ್ವೇಶ್ವರಯ್ಯ ನಾಲೆ ಅಥವಾ ವರುಣ ನಾಲೆ ಇರಬಹುದು. ಎರಡಕ್ಕೂ ಕೂಡ ಅದರ ಪ್ರಕಾರ ನಡೆದುಕೊಳ್ಳುತ್ತೇವೆ. On one point I agree with you. ರಾಕ್ ಹೊಡೆದು ಅದು ತೆಗೆಯದೇ ಇದ್ದರೆ ನಾವು ಎಷ್ಟು ಕೆಲಸ ಮಾಡಿದರೂ ಮುಂದೆ ಉಪಯೋಗವಾಗುವುದಿಲ್ಲ ಎನ್ನುವಂಥ ಮಾತನ್ನು ಒಪ್ಪುತ್ತೇನೆ. That work is going on. ಆಗಿರತಕ್ಕಂಥ ಫಂಡ್ಸ್ ಬಗ್ಗೆ ಕೂಡ ನಾವು

ಯಾವ ರೀತಿ ಪ್ರೊವೈಡ್ ಮಾಡಬೇಕು ಆ ರೀತಿ ನಾವು ಮಾಡುತ್ತೇವೆ. ಅದಕ್ಕಿಂತ ಜಾಸ್ತಿ ಹೇಳಲಿಕ್ಕೆ ಈಗ ಸಾಧ್ಯವಾಗುತ್ತಾ ಇಲ್ಲ.

ಕೋಲಾರದಲ್ಲಿ ವಿದ್ಯುತ್ ಕೇಂದ್ರದ ಸ್ಥಾಪನೆ

476 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರದಲ್ಲಿರುವ 220 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ಯಾವಾಗ ಸ್ಥಾಪಿಸಲಾಯಿತು?*

ಆ) *ಈ ವಿದ್ಯುತ್ ಉಪ ಕೇಂದ್ರದಿಂದ ಸರಬರಾಜಾಗುತ್ತಿರುವ ಪ್ರದೇಶಗಳು ಹಾಗೂ ಈ ಉಪ ಕೇಂದ್ರದಲ್ಲಿ ಬೇಕಾಗಿರುವ ವಿದ್ಯುತ್ ಪರಿವರ್ತಕಗಳ ಸಂಖ್ಯೆ ಎಷ್ಟು?*

ಇ) *ಬೇಕಾಗಿರುವಷ್ಟು ವಿದ್ಯುತ್ ಉಪಕೇಂದ್ರಗಳನ್ನು ಇನ್ನೂ ಹಾಕದಿರುವ ಸಂಗತಿಯು ನಿಜವೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಆಗಸ್ಟ್ 1989ರಿಂದ.

ಆ) ಈ ವಿದ್ಯುತ್ ಉಪ-ಕೇಂದ್ರದ ಕೋಲಾರ, ಶ್ರೀನಿವಾಸಪುರ, ಮುಳಬಾಗಿಲು ಮತ್ತು ಮಾಲೂರು ತಾಲ್ಲೂಕುಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಿದೆ. ಈ ಉಪ ವಿದ್ಯುತ್ ಕೇಂದ್ರದಲ್ಲಿ 2×100 ಎಂ.ವಿ.ಎ. ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು ಅಳವಡಿಸಲು ಉದ್ದೇಶಿಸಿದ್ದು, ಇದರ ಪೈಕಿ ಒಂದು ಈಗ ಕೆಲಸ ನಿರ್ವಹಿಸುತ್ತಿದೆ. ಇನ್ನೊಂದು ಪರಿವರ್ತಕವನ್ನು ಅಳವಡಿಸಬೇಕಾಗಿದೆ.

ಅಲ್ಲದೆ, ಈ ವಿದ್ಯುತ್ ಉಪಕೇಂದ್ರದಲ್ಲಿ 2 x 5 ಎಂ.ವಿ.ಎ. ಸಾಮರ್ಥ್ಯದ ಪರಿವರ್ತಕಗಳನ್ನು ಅಳವಡಿಸಲಾಗುತ್ತಿದೆ.

ಇ) ಹೌದು. ಕೋಲಾರ ಜಿಲ್ಲೆಯಲ್ಲಿ ಬೇಕಾಗಿರುವ ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ಹಂತ ಹಂತವಾಗಿ ಅವಶ್ಯಕತೆ ಹಾಗೂ ಆದ್ಯತೆಯ ಮೇರೆಗೆ ಸ್ಥಾಪಿಸಲಾಗುವುದು.

ಶ್ರೀ ಸಿ. ಬೈರೇಗೌಡ: ಸನ್ಮಾನ್ಯ ಅಧ್ಯಕ್ಷರೇ 2 x 100 ಎಂ.ವಿ.ಎ. ಟ್ರಾನ್ಸ್‌ಫಾರ್ಮರ್ ಅನ್ನು ಅಲ್ಲಿ ಹಾಕುವುದಕ್ಕೆ ಬದಲಾಗಿ ಒಂದೇ ಒಂದು ಹಾಕಿರತಕ್ಕಂಥಾದ್ದು. ಈಗ ಉಳಿದಿರತಕ್ಕಂಥ ಮತ್ತೊಂದನ್ನು ಯಾವಾಗ ಅಲ್ಲಿ ಹಾಕುತ್ತೀರಿ ಮತ್ತೆ 2 x 500 ಎಂ.ವಿ.ಎ. ತಾವು ಅಳವಡಿಸಲಾಗುತ್ತಿದೆಯೆಂದು ಹೇಳುತ್ತೀರಿ. ಅಲ್ಲಿಗೆ ಬೇಕಾಗಿರತಕ್ಕಂಥದ್ದು 2 x 5 ಎಂ.ವಿ.ಎ. ಅಲ್ಲ, ಇದು 20 ಎಂ.ವಿ.ಎ. ಬೇಕಾಗಿರತಕ್ಕಂಥದ್ದು. ಇದನ್ನು ಯಾವಾಗ ಹಾಕುತ್ತೀರಿ ಮತ್ತೆ ಅವಶ್ಯಕತೆ ಹಾಗೂ ಬೇರೆ ಬೇರೆ ಸಬ್‌ಸ್ಟೇಷನ್ಸ್ ಅವಶ್ಯಕತೆ ಹಾಗೂ ಆದ್ಯತೆಯ ಮೇರೆಗೆ ಸ್ಥಾಪಿಸಲಾಗುವುದು ಎಂದು ಹೇಳಿದ್ದೀರಿ. ಇದನ್ನು ಯಾವಾಗ ಸ್ಥಾಪನೆ ಮಾಡುತ್ತೀರಿ? ಮತ್ತು ವೇಮಗಲ್‌ನಲ್ಲಿ ಒಂದು ಸಬ್‌ಸ್ಟೇಷನ್ ಈಗಿರತಕ್ಕಂತಹ ಕೆಪಾಸಿಟಿ ಏನು ಇದೆ, ಅದು ಎಕ್ಸಾಸ್ಟ್ ಆಗಿದೆ, ಓವರ್ ಲೋಡ್ ಆಗುತ್ತಾ ಇದೆ. ಅದಕ್ಕೆ ಅಡಿಷನಲ್ ಟ್ರಾನ್ಸ್‌ಫಾರ್ಮರನ್ನು ಯಾವಾಗ ಹಾಕುತ್ತೀರಿ? ಮತ್ತು ಡೀಸೆಲ್ ಜನರೇಟಿಂಗ್ ಸ್ಟೇಷನ್ ಅನ್ನು ಕೋಲಾರದಲ್ಲಿ ಹಾಕಬೇಕಾಗಿತ್ತು. ಕೋಲಾರದಲ್ಲಿ ಅದನ್ನು ಯಾವಾಗ ಹಾಕುತ್ತೀರಿ?

ಶ್ರೀ ಎಸ್. ಬಂಗಾರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಡೀಸೆಲ್ ಸ್ಟೇಷನ್ ವಿಚಾರ ಒಂದೇ ಅಲ್ಲ. ಅದರ ಜೊತೆಗೆ ಇನ್ನೂ ಕೂಡ 3- 4 ಕರ್ನಾಟಕ ರಾಜ್ಯದಲ್ಲಿದೆ ಎಂಬ ಬಗ್ಗೆ ನಾವು ಈಗಾಗಲೇ ಉತ್ತರ ಕೊಟ್ಟಿದ್ದೇವೆ. ಅದು ಈ ಸದನದಲ್ಲೂ